

ಹಿರಿಯ ವಯಸ್ಕರ ಉಚಿತ 'ಡೇ ಕೇರ್' ಸೆಂಟರ್‌ಗೆ ಲೇಖಕಿ ಭೇಟಿ ಕೊಟ್ಟಾಗ

ಕಂಪನಿಯ ಕೆಲಸಗಳಿಗೆ ಅರ್ಜಿ ಹಾಕಿದರು. ಅವರಿಗೆ ಎಚ್.ಎ.ಎಲ್, ಬಿ.ಎಚ್.ಇ.ಎಲ್. ಎರಡರಲ್ಲೂ ಕೆಲಸ ಸಿಕ್ಕಿತ್ತು. 1982 ಎಚ್.ಎ.ಎಲ್.ಗೆ ಸೇರಿದರು; ತರಬೇತಿಗೆ ಮದ್ರಾಸ್ ಐಐಟಿಗೆ ಕಾರ್ಖಾನೆ ಕಳುಹಿಸಿದ ಕಾರಣ, ಎಂ.ಟೆಕ್. ಪದವಿಯನ್ನೂ ಪಡೆದರು. ಐಐಟಿ ಮದ್ರಾಸ್‌ನಿಂದ ಹಿಂತಿರುಗಿದ ಶಾರದಾ ಅವರಿಗೆ 'ಫ್ಲೈಟ್ ಟೆಸ್ಟ್ ಸೆಂಟರ್'ನಲ್ಲಿ ಪೋಸ್ಟಿಂಗ್ ದೊರೆಯಿತು. ವಿಮಾನ ಮತ್ತು ಹೆಲಿಕಾಪ್ಟರುಗಳ ಪರೀಕ್ಷಣಾ ಹಾರಾಟದ ಜವಾಬ್ದಾರಿ ಈ ಕೇಂದ್ರದ್ದಾಗಿತ್ತು. ಆ ಸಮಯದಲ್ಲಿ, 'ಅಜೀತ್' ಯುದ್ಧ ವಿಮಾನದ ಪರೀಕ್ಷಣಾ ಹಾರಾಟಗಳು ನಡೆಯುತ್ತಿದ್ದವು. 1986ರಲ್ಲಿ ತಾಯಿ–ತಂದೆ ತಿರುಮಂಗಲಂನಲ್ಲಿದ್ದ ಸಮಯ; ಇನ್ನೂ 56 ವರ್ಷ ವಯಸ್ಸಿನ ತಂದೆ ಕ್ಯಾನ್ಸರ್‌ನಿಂದ ಮೃತರಾದರು. ತಂದೆಗೆ ನಶ್ಯ ಏರಿಸುವ ಚಟವಿತ್ತು. ಅವರ ಕೆನ್ನೆಯ ಮೂಳೆಗೆ 'ಮ್ಯಾಕ್ಸಿಲರಿ ಕ್ಯಾನ್ಸರ್' ಬಡಿದಿತ್ತು. ಇಷ್ಟರಲ್ಲಿ ಅಕ್ಕನಿಗೇನೋ ವಿವಾಹವಾಗಿ ಮದ್ರಾಸ್‌ನಲ್ಲಿದ್ದರು. ಆದರೆ ತಂಗಿ ತಂಜಾವೂರಿನಲ್ಲಿ ಮೆಡಿಕಲ್ ಓದುತ್ತಿದ್ದಳು; ಶಾರದಗಿಂತ 9 ವರ್ಷಕ್ಕೆ ಕಿರಿಯವನಾದ ತಮ್ಮ ಈಗಿನ್ನೂ ಎರಡನೇ ಪಿಯುಸಿ ಮುಗಿಸಿದ್ದ. ಬದುಕಿನ ಈ ಸಂಕಷ್ಟದ ಸಮಯದಲ್ಲಿ, ಶಾರದಾ ಕುಟುಂಬದ ಜವಾಬ್ದಾರಿ ಹೊತ್ತರು. ಅಮ್ಮ ಮತ್ತು ತಮ್ಮನನ್ನು ಬೆಂಗಳೂರಿಗೆ ಕರೆತಂದರು, ಕಾರ್ಖಾನೆ ನೀಡಿದ ಕ್ವಾರ್ಟರ್ಸ್‌ನಲ್ಲಿ ಶಾರದಾ, ತಾಯಿ ಮತ್ತು ತಮ್ಮನೊಡನೆ ವಾಸಿಸತೊಡಗಿದರು.

1987ರಲ್ಲಿ ಶಾರದಾ ಹಿರಿಯರು ನೋಡಿದ ಸಂಬಂಧಕ್ಕೆ ಒಪ್ಪಿ ವಿವಾಹವಾಗಲು ಸಿದ್ಧರಾದರು. ಆದರೆ ಮದುವೆಗೆ ಮೊದಲು ಹುಡುಗನಿಗೆ, ಮತ್ತು ಆತನ ತಂದೆ–ತಾಯಿಗೆ ತನ್ನ ಮನೆಯ ಸ್ಥಿತಿಯನ್ನು ವಿವರಿಸಿದರು. ತಾನು ಮದುವೆಯಾದ ಮೇಲೆ ಕೂಡಾ, ತನ್ನ ತಾಯಿ ಮತ್ತು ತಮ್ಮನ ಜವಾಬ್ದಾರಿಯನ್ನು ಹೊರುವೆನೆಂದೂ, ಆರ್ಥಿಕವಾಗಿಯೂ ಅವರ ಸಹಾಯಕ್ಕೆ ನಿಲ್ಲುವೆನೆಂದೂ ಸ್ಪಷ್ಟವಾಗಿ ತಿಳಿಸಿದರು. ಇದು ಅವರಿಗೆ ಒಪ್ಪಿಗೆ ಇದ್ದಲ್ಲಿ ಮಾತ್ರ ಮುಂದುವರೆಯಲು ನಿರ್ಧರಿಸಿದರು. ಅವರು ಒಪ್ಪಿದರು. ಶಾರದಾ, ಶ್ಯಾಮಸುಂದರ ಅವರನ್ನು ವಿವಾಹವಾದರು. ಪತಿ ಎಲೆಕ್ಟ್ರಿಕಲ್ ಎಂಜಿನಿಯರ್ ಆಗಿ ಖಾಸಗಿ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದರು. ಅವರ ಅತ್ತೆ–ಮಾವನ ಮನೆ ಮಾರತಹಳ್ಳಿಯಲ್ಲಿತ್ತು.

ಈಗ ಈ ಉದ್ಯೋಗಸ್ಥ ಮಹಿಳೆಯ ಬದುಕು ಮತ್ತಷ್ಟು 'ಬಿಜಿ'ಯಾಗಿತ್ತು. ಕಾರ್ಖಾನೆಯ ಕೆಲಸ ಮುಗಿಸಿ ಇಲ್ಲಿಯ ಮಾರುಕಟ್ಟೆಯಲ್ಲಿ ಎರಡು ಚೀಲದಲ್ಲಿ ತರಕಾರಿ ಕೊಂಡು, ಕ್ವಾರ್ಟರ್ಸ್‌ನಲ್ಲಿರುವ ಅಮ್ಮನ ಮನೆಗೆ ಹೋಗಿ ಒಂದು ಚೀಲ ಅಲ್ಲಿ ಇರಿಸಿ, ಅಮ್ಮನನ್ನು ತಮ್ಮನನ್ನು ವಿಚಾರಿಸಿಕೊಂಡು, ಅಲ್ಲಿಂದ ಮಾರತಹಳ್ಳಿಯ ತಮ್ಮ ವಿವಾಹಿತ ಗೃಹಕ್ಕೆ ಧಾವಿಸುವರು. ಒಂದು ಲೂನಾ ಕೊಂಡಿದ್ದರು. ಅದರಲ್ಲಿ ಕಾರ್ಖಾನೆ, ಅತ್ತೆ ಮತ್ತು ಅಮ್ಮನ ಮನೆಗಳ ನಡುವೆ ಅವರ ಓಡಾಟ. ಕೆಲಸದ ಕಾರಣಕ್ಕೆ, ಹೊರ ಊರುಗಳಿಗೆ, ಏರ್‌ಫೋರ್ಸ್ ಬೇಸ್‌ಗಳಿಗೆ ಹೋಗಬೇಕಾಗುತ್ತಿತ್ತು. ಪತಿಯ ಪೂರ್ಣ ಸಹಕಾರವಿತ್ತು.

ಶಾರದಾ ಅವರ ತಮ್ಮ ಬಿ.ಕಾಂ. ಸೇರಿದ್ದರು. ನಂತರ ಅವರಿಗೆ ರೈಲ್ವೆನಲ್ಲಿ ಗುಮಾಸ್ತ ನೌಕರಿ ದೊರೆಯಿತು. ಅಲ್ಲಿ ಏಳು ವರ್ಷ ಕೆಲಸ ಮಾಡುತ್ತಿದ್ದಂತೆ ಅವರು ಕಂಪ್ಯೂಟರ್, ಸಾಫ್ಟ್‌ವೇರ್ ತಜ್ಞತೆಯ ಕೋರ್ಸ್‌ಗಳನ್ನೂ ಮಾಡಿಕೊಂಡರು. 1995ರಲ್ಲಿ ಅಮೆರಿಕೆಗೆ ಹೋಗಿ ಅಲ್ಲಿಯೇ ನೆಲೆಸಿದರು. 2007ರಲ್ಲಿ ಅಮ್ಮನಿಗೆ 'ಗ್ರೀನ್ ಕಾರ್ಡ್' ದೊರೆತಾಗ, ತಮ್ಮನೊಡನೆ ಅಮೆರಿಕದಲ್ಲಿಯೇ ನೆಲೆನಿಂತರು.

2008ರಲ್ಲಿ ಶಾರದಾ ವಿಮಾನ ಸಂಶೋಧನೆಯ 'ಫ್ಲೈಟ್ ಟೆಸ್ಟ್ ಸೆಂಟರ್'ಗೆ ಮುಖ್ಯಸ್ಥರಾದರು. ಮಗನ ಬಳಿಯಿದ್ದ ಇಳಿ ವಯಸ್ಸಿನ ತಾಯಿ 2017ರಲ್ಲಿ ಭಾರತಕ್ಕೆ ಹಿಂತಿರುಗಲು ಬಯಸಿದರು. ಹೆಣ್ಣುಮಕ್ಕಳು ಅಮ್ಮನ ಜವಾಬ್ದಾರಿ ಹೊರುವುದಾಗಿ ತಮ್ಮನಿಗೆ ಭರವಸೆ ನೀಡಿದರು. ಶಾರದಾ ಅವರ ಮನೆಗೆ ಅವರ ತಾಯಿ ಬಂದು ನೆಲೆಸಿದರು. ಆಗ, ಶಾರದಾ ಅವರೊಡನೆ ಅಸ್ವಸ್ಥರಾಗಿ ಹಾಸಿಗೆ ಹಿಡಿದ ಅವರ ಅತ್ತೆ ಮತ್ತು 92 ವರ್ಷ ವಯಸ್ಸಿನ ಮಾವ ಇದ್ದರು. ದಶಕಗಳ ಹಿಂದೆ ಕೊಂಡ ಬನಶಂಕರಿಯ ಫ್ಲಾಟ್ ಒಂದರಲ್ಲಿ ಶಾರದಾ ಅವರ ಕುಟುಂಬದ ವಾಸವಿತ್ತು. ಕೋವಿಡ್ ಬಂದ ಮೇಲಂತೂ ಕೆಲವು ತಿಂಗಳ ಮಟ್ಟಿಗೂ ಶಾರದಾ ಅಮ್ಮನನ್ನು ಎಲ್ಲಿಗೂ ಕಳುಹಿಸದೆ ತಮ್ಮಲ್ಲಿ ಸುರಕ್ಷಿತವಾಗಿ ಇರಿಸಿಕೊಂಡರು.

## ನಾವೊಂದು 'ತಂಡ' - ಟೀಮ್ ವರ್ಕ್

ಶಾರದಾ ಈ ಸಮಯದಲ್ಲಿ 'ಅಡಿಷನಲ್